**11707** **M-108**

Sl.No. 21858 **Total No. of Pages : 3**

# ಎರಡನೆಯ ಚತುರ್ಮಾಸ ಬಿ.ಕಾಂ./ಬಿ.ಬಿ.ಎಂ./ಬಿ.ಬಿ.ಎ/ ಬಿ.ಸಿ.ಎ./ಬಿ.ಸಿ.ಎಸ್.

## ಪರೀಕ್ಷೆ, ಏಪ್ರಿಲ್ / ಮೇ 2018

## (ಸ್ಕೀಮ್ : ಚತುರ್ಮಾಸ) (Freshers of May/June-2017 & Onwords)

## ಕನ್ನಡ ಭಾಷೆ (ಪತ್ರಿಕೆ – ೨)

### ಸವಿಸ್ತರ, ಅವಿಸ್ತರ ಪಠ್ಯಗಳು ಮತ್ತು ಜ್ಞಾಪಕ ಚಿತ್ರಶಾಲೆ

**ಸಮಯ: 3 ಗಂಟೆಗಳು** **ಗರಿಷ್ಠ ಅಂಕಗಳು : 80**

*ಸೂಚನೆ:* **2016-17 ಮತ್ತು 2017-18 ರ ವರೆಗಿನ ವಿದ್ಯಾರ್ಥಿಗಳಿಗೆ**

### ಸವಿಸ್ತರ ಪಠ್ಯ : ತಾಳೀಕಟ್ಟೋಕ್ಕೂಲೀನೇ? (40 ಅಂಕಗಳು)

*ಪ್ರ1)* ಅ) ಒಂದರ ಭಾವವನ್ನು ಸಂದರ್ಭಸಹಿತ ವಿವರಿಸಿ: [4]

೧) ಇವರಿಗೆ ಹುಚ್ಚು ಹಿಡೀದೆ ಇರೋದು ಆಶ್ಚರ್ಯ......! ತನ್ನ ಭಾಗ್ಯಾನ ಕಳಕೊಂಡ ಯಾತನೇಲಿ ಅಲ್ಪ ಸ್ವಲ್ಪ ರೇಗಿದಾಕ್ಷಣವೇ, ನಾವು ಮನಸ್ಸಿಗೆ ತಂದ್ಕೊಳ್ಳೋದೇ? ತಪ್ಪು ಸಾತೂ....... ಇನ್ನು ಮೇಲೆನಾಗತ್ತೆ ಏನ್ ಹೇಳಿದರೂ ಏನ್ ಮಾಡಿದರೂ........ಬಾಯಿಲೇಲಿ ರೋಗಿಗಳು ನೋವು ತಡೀಲಾರದೆ ರೇಗಿದರೆ ಹ್ಯಾಗೆ ಮನಸ್ಸಿಗೆ ತಂದುಕೋಬಾರದೊ ಹಾಗೆ ಮನಸ್ಸಿಗೆ ತಂದುಕೊಳ್ಳದೆ ನಡಕೊಳ್ಳೋದು......ಅದು ಜಾಣತನ!! ಅರ್ಥವೇ......

೨) ಮೊದಲು, ಮದುವೆಗೆ ತಮ್ಮನ್ನ ಕರೀದೆ ಇದ್ದದ್ದಕ್ಕೆ ಕಾರಣ ಹೇಳೋದೆ!...... ನನಗೂ ನನ್ನ ಗೃಹಿಣೀಗೂ........ ನಾವು ಈಗಿರೋ ಅಂತಸ್ತು ಸಾಲದೇ ಇನ್ನೂ ದೊಡ್ಡ ಮನುಷ್ಯರ ಕುಟುಂಬದ ಸಂಬಂಧ ಮಾಡಿ ಮೆರೀಬೇಕೂ ಅಂಬೋ ಸಂಭ್ರಮದಲ್ಲಿ......ನಮಗೆ ಗುರ್ತಾದ ಬಹಳ ಜನಾನ ಮದುವೆಗೆ ಕರೀದೆ ಇದ್ದು. ಅದಕ್ಕೆ ಪ್ರತಿಫಲ ಅನುಭವಿಸಿದ್ದೂ ಆಯಿತು.........

*P.T.O.*

ಆ) ಆರು ಪದಗಳಿಗೆ ಅರ್ಥ ಬರೆಯಿರಿ: [6×½=3]

ಪಾದಪದ್ಮ, ಮಷಾಣ, ತಾತ್ಸಾರ, ರಕ್ತವರ್ಣ, ತುಚ್ಛ,

ಮಂಕು, ಕುಸುಮ, ಡುಮ್ಕಿ, ಬಿಂಕ, ಮನಸ್ತಾಪ.

ಇ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: [2×1½=3]

ಟಿ.ಪಿ. ಕೈಲಾಸಂ, ಸಾತು, ಶಂಕರ.

ಪ್ರ2) ನಾಲ್ಕರ ಸಂದರ್ಭ ಸ್ವಾರಸ್ಯವನ್ನು ವಿವರಿಸಿ: [4×2½=10]

೧) ಏನ್ಸಾರ್ ಇದು ಚೌಕಾಸಿ ....... ಇದೇನಂಗ್ಡೀನೇ?

೨) ಇನ್ನಾರ್ತಿಂಗ್ಳು ನಾನು ಆ ಮನೇಗೆ ಹೋಗೋ ಮಾತೆತ್ತಿದ್ರೋ.......

೩) ದಯವಿಟ್ಟು ಆ ವರದಕ್ಷಿಣೆ ಮಾತು ಈ ಮನೇಲಿ ಎತ್ತಬೇಡಿ!

೪) ಒಪ್ದೆ, ಒಪ್ದೆ, ಒಪ್ದೆ! ವಜ್ರ ಪರೀಕ್ಷೇಲಿ ನೀನು ಫಸ್ಟು!

೫) ನೀನ್ ನವಿಲ್‌ಗರೀ ಮರೀ ಕೊಟ್ಟಾಗ, ನನ್ನ ಕಲ್‌ಸಕ್ರೆ ಮರಿ ಕೊಡತೇನೆ ನಿನಗೆ.

೬) ಕಡುಪಾಪಿಗಳು! ಕಟುಕರಿಗೂ ಕೂಡ ಇಷ್ಟು ಅನ್ಯಾಯ ತೋಚೋದಿಲ್ಲ!

ಪ್ರ3) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ವರದಕ್ಷಿಣೆಯ ಪಿಡುಗು ನಾಟಕದಲ್ಲಿ ಅನಾವರಣಗೊಂಡ ಬಗೆ ಹೇಗೆ? ವಿಶ್ಲೇಷಿಸಿ.

೨) ಮದುವೆಯ ದಿನ ರಾಮಣ್ಣ ಮತ್ತು ನರಸಿಂಹಯ್ಯ ಮಧ್ಯೆ ನಡೆದ ವಾಗ್ವಾದಕ್ಕೆ ಕಾರಣವೇನು? ಇದರ ಪರಿಣಾಮವನ್ನು ವಿವರಿಸಿ.

ಪ್ರ4) ಎರಡನ್ನು ಸಂಕ್ಷಿಪ್ತವಾಗಿ ವಿವರಿಸಿ: [2×5=10]

೧) ನಾಗತ್ತೆಯ ಪಾತ್ರವನ್ನು ಪರಿಚಯಿಸಿ.

೨) ಲಕ್ಷ್ಮೀದೇವಮ್ಮ ಮತ್ತು ಪಾರ್ವತಮ್ಮ – ಇವರಿಬ್ಬರ ನಡುವೆ ನಡೆದ ಮದುವೆ ಮಾತುಕತೆಯನ್ನು ಸಂಗ್ರಹಿಸಿ ಬರೆಯಿರಿ.

೩) ಪುಟ್ಟ ಮತ್ತು ಮಗು– ಇವರಿಬ್ಬರ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

೪) ನರಸಿಂಹಯ್ಯನ ಮಗಳ ಮದುವೆಯನ್ನು ಹೇಗೆ ಮಾಡಿ ಮುಗಿಸಿದರು? ವಿವರಿಸಿ.

**11707** **M-108**

### ಅವಿಸ್ತರ ಪಠ್ಯ : ಜುಗಾರಿಕ್ರಾಸ್ (20 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಕಾದಂಬರಿಯಲ್ಲಿ 'ಜುಗಾರಿಕ್ರಾಸ್'ನ ವಿಶೇಷವೇನು? ವಿವರಿಸಿ.

೨) ಕ್ಯಾಪ್ಟನ್ ಖಿದ್ದೂಸನ 'ಘಾಟಿಎಕ್ಸ್‌ಪ್ರೆಸ್'ನ ಪ್ರಯಾಣದ ಬಗ್ಗೆ ಬರೆಯಿರಿ.

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ದೌಲತ್‌ರಾಮ್ ಮತ್ತು ಕರುಣಾಕರ ಕುಟ್ಟಿ ಪಾತ್ರಗಳನ್ನು ಪರಿಚಯಿಸಿ.

೨) ಸುರೇಶ ಮತ್ತು ಗೌರಿಯರ ಏಲಕ್ಕಿ ಮಾರಾಟದ ರೀತಿಯನ್ನು ವಿವರಿಸಿ.

### ವ್ಯಕ್ತಿಚಿತ್ರ : ಜ್ಞಾಪಕ ಚಿತ್ರಶಾಲೆ (20 ಅಂಕಗಳು)

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಭಾರತದ ಪ್ರಥಮ ಪ್ರಜಾರಾಜ್ಯವಾದಿ ಸಿ.ರಂಗಾಚಾರ್ಯರ ವ್ಯಕ್ತಿತ್ವ ಮತ್ತು ದೇಶಹಿತ ಚಿಂತನೆಯ ಬಗ್ಗೆ ಬರೆಯಿರಿ.

೨) ದಿವಾನ ಮಿರ್ಜಾ ಇಸ್ಮಾಯಿಲ್ ಸಾಹೇಬರ ಸದ್ಗುಣ, ಸದ್ಭಾವನೆ ಮತ್ತು ಸಾಧನೆಗಳನ್ನು ವಿವರಿಸಿ.

ಪ್ರ8) ಎರಡು ಪ್ರಶ್ನೆಗೆ ಉತ್ತರಿಸಿ: [2×5=10]

೧) ಸಿ. ರಾಜಗೋಪಾಲಚಾರ್ಯರ ಸಮಾಜ ಮತ್ತು ಸಾಹಿತ್ಯ ಸೇವೆಯನ್ನು ಪರಿಚಯಿಸಿ.

೨) ಎಂ.ಎಲ್. ಶ್ರೀಕಂಠೇಶಗೌಡರ ಸಾಹಿತ್ಯ ಸಾಧನೆಗಳೇನು?

೩) ಪಂಜೆ ಮಂಗೇಶರಾಯರ ಸಹೃದಯತೆ ಮತ್ತು ಸಾಹಿತ್ಯ ಸೇವೆಯ ಪರಿಯನ್ನು ತಿಳಿಸಿ.

೪) ಇಬ್ಬರು ಮುಸಲ್ಮಾನ ಬಂಧುಗಳನ್ನು ಪರಿಚಯಿಸಿ.